# ದೇಶದ ನ್ಯಾಯಾಂಗ ವ್ಯವಸ್ಥೆ ನಂಬಿಕೆ ಕಳೆದುಕೊಳ್ಳುತ್ತಿದೆ

## ಎಸ್‌ವಿಕೆಎಂ ಘಟಿಕೋತ್ಸವದಲ್ಲಿ ನಿವೃತ್ತ ನ್ಯಾ. ಗೋಪಾಲ ಗೌಡ ಅಭಿಮತ



ಎಸ್‌ವಿಕೆಎಂ ಬೆಂಗಳೂರು ಕೇಂದ್ರದ ಘಟಿಕೋತ್ಸವ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು.

**ಬೆಂಗಳೂರು:** ಎಸ್‌ವಿಕೆಎಂನ ಎನ್‌ಎಂಐಎಂಎಸ್ ಬೆಂಗಳೂರು ಕೇಂದ್ರದ ಕಾನೂನು, ವಾಣಿಜ್ಯ ಮತ್ತು ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ಘಟಿಕೋತ್ಸವ ಕಾರ್ಯಕ್ರಮವು ಇತ್ತೀಚೆಗೆ ಆಯೋಜನೆಗೊಂಡಿತ್ತು. ಕಾರ್ಯಕ್ರಮದಲ್ಲಿ ಕಾನೂನು ಮತ್ತು ತಂತ್ರಜ್ಞಾನ ಕ್ಷೇತ್ರದ ಗಣ್ಯ ವ್ಯಕ್ತಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸುಪ್ರೀಕೋರ್ಟ್‌ನ ನಿವೃತ್ತ ನ್ಯಾಯಾಧೀಶ ವಿ. ಗೋಪಾಲ ಗೌಡ ಘಟಿಕೋತ್ಸವ ಕಾರ್ಯಕ್ರಮ ದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, 'ಪ್ರತೀ ಬಾರಿ ವಕೀಲರು ನಿಯಮಗಳನ್ನು ಮೀರಿದಾಗ ಅಥವಾ ತಪ್ಪುದಾರಿಗೆ ಹೋದಾಗ, ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಮಾಜವು ನಂಬಿಕೆ ಕಳೆದು ಕೊಳ್ಳುತ್ತದೆ. ನ್ಯಾಯ, ಸಮಾನತೆ, ಸ್ವಾಯತ್ತತೆ ಮತ್ತು ಭ್ರಾತೃತ್ವದ ನಿಯಮಗಳನ್ನು ಎಲ್ಲರೂ ರೂಢಿಸಬೇಕು' ಎಂದು ಅವರು ಕರೆ ನೀಡಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಕೆ.ಜಿ. ರಾಘವನ್ ಅತಿಥಿಗಳಾಗಿ ಪಾಲ್ಗೊಂಡು, 'ವಿದ್ಯಾರ್ಥಿಗಳು ಪರಿಣತಿ ಸಾಧಿಸಲು ಸದಾ ಪ್ರಯತ್ನಿಸಬೇಕು. ತಂತ್ರಜ್ಞಾನ ಜೀವನಕ್ಕೆ ಮಾರ್ಗದರ್ಶನವಾಗಿರಲಿ' ಎಂದು ಕಿವಿಮಾತು ಹೇಳಿದ್ದಾರೆ.

ವಾಣಿಜ್ಯ ಮತ್ತು ಅರ್ಥಶಾಸ್ತ್ರ ವಿದ್ಯಾಲಯದ ಪದವೀಧರರನ್ನು ಉದ್ದೇಶಿಸಿ ಮಾತನಾಡಿದ ಟಾಟಾ ಎಲೆಕ್ಸಿ ಸ್ಟ್ರಾಟಜಿಕ್ ರಿಲೇಶನ್ಸ್‌ನ ಜಾಗತಿಕ ಮುಖ್ಯಸ್ಥ ಭಾಸ್ಕರ ದತ್ 'ವಿಶ್ವದ ಪರಿಣಿತರ ಎಲ್ಲಾ ಯೋಚನೆಗಳು ಒಟ್ಟಿಗೆ ಸೇರಿದಾಗ ಅನ್ವೇಷಣೆ ಕಾರ್ಯಗತವಾಗುತ್ತದೆ. ಆಧುನಿಕ ಜಗತ್ತಿನಲ್ಲಿ ನಾವೀನ್ಯತೆ ಹೇಗೆ ಯಶಸ್ಸನ್ನು ರೂಪಿಸುತ್ತವೆ ಎಂಬುದನ್ನು ನೋಡಿದ್ದೇವೆ. ನಮ್ಮ ಯೋಜನೆಗಳು ಲಕ್ಷಾಂತರ ಜನರನ್ನು ತಲುಪಲು ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮವನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು' ಎಂದು ಅವರು ಕರೆ ನೀಡಿದರು.

ಕ್ಯಾಂಪಸ್ ನಿರ್ದೇಶಕಿ ಡಾ. ನಾರಾಯಣಿ ರಾಮಚಂದ್ರನ್ 2024-25ರ ವಾರ್ಷಿಕ ವರದಿಯನ್ನು ಬಿಡುಗಡೆಗೊಳಿಸಿದರು.

'ಎನ್‌ಎಂಐಎಂಎಸ್‌ನಲ್ಲಿನ ಕಲಿಕೆಯು ವಿದ್ಯಾರ್ಥಿಗಳ ಮಟ್ಟಿಗೆ ಯಾವಾಗಲೂ ಸಮರ್ಥ ವೃತ್ತಿಪರರ ಉತ್ತಮ ಶೈಕ್ಷಣಿಕ ಕೇಂದ್ರವಾಗಿದೆ' ಎಂದು ಸಹ ಉಪಕುಲಪತಿ ಡಾ. ಮೀನಾ ಚಿಂತಾಮಣಿ ಹೇಳಿದರು.

ಎನ್‌ಎಂಐಎಂಎಸ್ ಬೆಂಗಳೂರು ಕ್ಯಾಂಪಸ್ ನಿರ್ದೇಶಕಿ ಡಾ. ನಾರಾಯಣಿ ರಾಮಚಂದ್ರನ್ ತಮ್ಮ ಶೈಕ್ಷಣಿಕ ಕೇಂದ್ರದ ಬದ್ಧತೆಯನ್ನು ತಿಳಿಸಿದರು.

**Publication : Vishwavani**

**Edition : Bangalore**